(6ನೇ ಪುಟದಿಂದ)

ಅದು ಪ್ರಕೃತಿ ಬಿಡಿಸಿದ ಕಲೆ. ಒಂದೊಂದು ಬಂಡೆಯೂ ಒಂದೊಂದು ಕಾವ್ಯ. ಚಿತ್ರವಿಚಿತ್ರ ಚಿತ್ತಾರ! ಕ್ಯಾಮರಾ ಕಣ್ಣುಗಳಿಗೆ ಹಬ್ಬ!

ಭದ್ರೆಯ ನೀರಿನಿಂದ ಮೇಲೆದ್ದ ಈ ಕಲ್ಲುಬಂಡೆಗಳು ನೀರಿನ ರಭಸಕ್ಕೆ ಸಿಕ್ಕು ವಿಚಿತ್ರ ಆಕಾರಗಳನ್ನು ಪಡೆದುಕೊಂಡಿವೆ. ಬಂಡೆಗಳ ನಡುವೆ ಭೋರ್ಗರೆವ ಜಲಧಾರೆ ಪ್ರವಾಸಿಗರ ಮನ ಗೆಲ್ಲುತ್ತದೆ. ನೋಡಲು ಎರಡು ಕಣ್ಣುಗಳು ಸಾಲದು!

ಅಂಬಾತೀರ್ಥ ಎನ್ನುವುದು ಈ ಸ್ಥಳದ ಹೆಸರು. ಇದು ಪೌರಾಣಿಕ ಮಹತ್ವದ ಸ್ಥಳವೂ ಹೌದು. ಇಲ್ಲೊಂದು ದೊಡ್ಡ ಬಂಡೆ ಇದ್ದು, ಅದರ ಮೇಲೆ ಚೌಕಾಕಾರದ ಕಲ್ಲು ಸಮಾನಾಂತರವಾಗಿ ನಿಂತಿದೆ. ಇದನ್ನು ಭೀಮನ ಕಲ್ಲು ಎಂದೂ; ದ್ವೈತ ಸಿದ್ಧಾಂತ ಪ್ರತಿಪಾದಕ ಮಧ್ವಾಚಾರ್ಯರ ಬಂಡೆ ಎಂದೂ ಕರೆಯುತ್ತಾರೆ.

ಸುತ್ತಮುತ್ತಲ ಜನ ರಜಾದಿನದ ಸೊಬಗು ಸವಿಯಲು ಇಲ್ಲಿಗೆ ಬರುವುದಿದೆ. ಧಾರ್ಮಿಕ ಕ್ಷೇತ್ರ ಹೊರನಾಡಿಗೆ ಹೋಗುವವರೂ ಇಲ್ಲೊಂದು ಸ್ಟಾಪ್ ನೀಡಿ, ನೀರಲ್ಲಿ ಆಟವಾಡಿ, ಬಂಡೆಗಳ ಸೊಬಗನ್ನು ಕಣ್ತುಂಬಿಕೊಳ್ಳುವುದಿದೆ.





